ಮಾಡುವ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಕೆರೆಗಳು ಬಹಳ ಹೀನ ಸ್ಥಿತಿಯಲ್ಲಿ ಇವೆ. ಕೆರೆಗಳ ದುರಸ್ತಿಯಾದರೆ ನೀರಿನ ಸೌಲಭ್ಯವು ದೊರೆತು ಹೆಚ್ಚು ಧಾನ್ಯ ಉತ್ಪತ್ತಿಗೆ ಸಹಾಯವಾಗುವುದು.

ಜಿಲ್ಲಾ ಬೋರ್ಡುಗಳನ್ನು 1954ರಲ್ಲಿ ರದ್ದುಮಾಡಿ ಆಗಿನಿಂದಲೂ ಸ್ಪೆಷಲ್ ಆಫೀಸರ್ ನೇಮಕಮಾಡಿ ಕೆಲಸ ನಡೆದಿದೆ. ಈಗಿನ ಪ್ರಜಾಪ್ರಭುತ್ವದ ಕಾಲದಲ್ಲಿ ಜಿಲ್ಲಾ ಬೋರ್ಡುಗಳನ್ನು ರದ್ದು ಮಾಡಿರುವುದೂ ಮತ್ತು ಚುನಾವಣೆಗಳನ್ನು ನಡೆಸದೇ ಇದ್ದದ್ದೂ ಬಹಳ ಅನ್ಯಾಯವಾದದ್ದು. ಸಲಹಾ ಸಮಿತಿಗಳನ್ನು ನೇಮಕ ಮಾಡಿರುವುದು ನ್ಯಾಯವಾದುದಲ್ಲ. ಆದ ಕಾರಣ ಜಿಲ್ಲಾ ಬೋರ್ಡುಗಳ ಚುನಾವಣೆಗಳು ತೀವ್ರವಾಗಿ ನಡೆಯುವಂತೆ ಮಾಡಬೇಕು.

ಈ ಸಂದರ್ಭದಲ್ಲಿ ಇನ್ನೊಂದು ಮಹತ್ವದ ವಿಷಯ ಹೇಳುವುದೇನೆಂದರೆ ರಾಜಕೀಯ ಸಂತ್ರಸ್ತರಿಗೆ ಭೂಮಿಯನ್ನು ಹಂಚಲಾಗಿದೆ ಎಂದು ಮಾನ್ಯ ಮಂತ್ರಿಯವರಾದ ಶ್ರೀ ಮರಿಯಪ್ಪ ಅವರು ಹೇಳಿದರು. ಆದರೆ ಭೂಮಿಯಿಲ್ಲದ ಬಡಜನರಿಗೆ ಭೂಮಿಯು ಹಂಚಲ್ಪಡದೆ ರಾಜಕೀಯ ಸಂತ್ರಸ್ತರೆಂಬ ಹೆಸರಿನ ಮೇಲೆ ಭೂಮಿಯನ್ನು ಸಾಗುವಾಡದೇ ಇರುವವರಿಗೆ ಭೂಮಿಯನ್ನು ಕೊಡಲಾಗಿದೆ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—ನಾನು ಹಾಗೆ ಹೇಳಲಿಲ್ಲ. ರಾಜಕೀಯ ಸಂತ್ರಸ್ತರಿಗೆ ಭೂಮಿಯನ್ನು ಹಂಚುವ ವಿಷಯ ಬಂದಿತ್ತು. ಅದು ಭೂಮಿಯಿಲ್ಲದವರಿಗೆ ಭೂಮಿಯನ್ನು ಕೊಡುವ ವಿಷಯ ಆಗಿರಲಿಲ್ಲ. ರಾಜಕೀಯ ಸಂತ್ರಸ್ತರಾದವರಿಗೆ ಭೂಮಿಯಿಲ್ಲದಿದ್ದರೆ ಭೂಮಿಯನ್ನು ಕೊಡುವುದು ಅದಾಗಿದೆ.

ಶ್ರೀ ಬಿ. ಚಾಮಯ್ಯ.—ನಾನು ಹೇಳುತ್ತಿದ್ದುದು ಬಡವರಿಗೆ ಭೂಮಿಯನ್ನು ಕೊಟ್ಟಿಲ್ಲ ಎಂದು. ಗ್ರಾಮದಿಂದ 20-30 ಮೈಲು ದೂರ ಇರುವವರಿಗೆ ಭೂಮಿಯನ್ನು ಕೊಡಲಾಗಿದೆ. ಜಮೀನು ಇರುವ ಗ್ರಾಮದ ರೈತರಿಗೆ ಜಮೀನು ಕೊಟ್ಟ ಬಗ್ಗೆ ಅನೇಕ ನಿದರ್ಶನಗಳು ಇವೆ. ಭೂಮಿ ಇಲ್ಲದವರಿಗೆ ಭೂಮಿಯನ್ನು ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ದೇಶದಲ್ಲಿ ನೆಮ್ಮದಿ, ಶಾಂತಿ ನೆಲೆಸುವಂತೆ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ವಿರಾಮಕಾಲದ ಅನಂತರ ಎಂದರೆ 10-30 ಗಂಟೆಯ ಅನಂತರ ನಿರ್ಣಯವನ್ನು ಮಂಡಿಸಿರುವ ಸದಸ್ಯರು ಮತ್ತು ಮಂತ್ರಿಗಳು ಭಾಷಣ ಮಾಡುತ್ತಾರೆ. ರಾಜ್ಯಪಾಲರವರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ನಿರ್ಣಯದ ಮೇಲೆ ನಡೆದ ಚರ್ಚೆಯಲ್ಲಿ ಇಲ್ಲಿಯ ವರೆಗೆ ಒಟ್ಟು 46 ಸದಸ್ಯರು ಮಾತನಾಡಿ ಭಾಗವಹಿಸಿದ್ದಾರೆ. ಇದರಲ್ಲಿ ಆರು ಮಹಿಳೆಯರು ಭಾಷಣ ಮಾಡಿದ್ದಾರೆ. ಮಹಿಳೆಯರಿಗೆ ಸಾಕಷ್ಟು ಅವಕಾಶ ದೊರೆತಿದೆ ಎಂದು ನಾನು ಭಾವಿಸಿದ್ದೇನೆ. ಈ ಚರ್ಚೆಯಲ್ಲಿ 22 ಜನ ಕಾಂಗ್ರೆಸ್ ಪಕ್ಷದ ಸದಸ್ಯರೂ ಮತ್ತು 24 ಜನ ವಿರೋಧಿ ಪಕ್ಷದ ಸದಸ್ಯರೂ ಭಾಗವಹಿಸಿದ್ದಾರೆ. ಈಗಾಗಲೇ ನಾಲ್ಕುದಿವಸಗಳವರೆಗೆ ಈ ಚರ್ಚೆ ನಡೆದಿದೆ ರಾಜ್ಯಪಾಲರವರ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವ ನಿರ್ಣಯದ ಮೇಲೆ ಮಾತನಾಡಲು ಇನ್ನೂ ಎರಡು ದಿವಸ ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಪಾರ್ಲಮೆಂಟಿನಲ್ಲಿ 500 ಸದಸ್ಯರು ಇದ್ದರೂ ಸಹ ಇಂಥ ನಿರ್ಣಯದ ಮೇಲೆ ಚರ್ಚೆಯು ಎರಡು ದಿವಸಗಳ ವರೆಗೆ ಮಾತ್ರ ನಡೆಯುವುದು. ಈ ಸಭೆಯಲ್ಲಿ ಹೆಚ್ಚು ದಿವಸಗಳು ಯಾಕೆ ಬೇಕೆಂಬುದು ನನಗೆ ಅರ್ಥವಾಗುವುದಿಲ್ಲ. ಈ ಚರ್ಚೆ ಎರಡು ದಿವಸಗಳ ವರೆಗೆ ಮಾತ್ರ ನಡೆಯಬೇಕು; ಎಲ್ಲ ಸದಸ್ಯರಿಗೂ ಮಾತನಾಡಬೇಕೆಂದು ಇಚ್ಛೆ ಇದೆ. ಆದರೆ ಕಾಲಾವಕಾಶದ ಪರಿಮಿತಿಯು ಇರುವುದರಿಂದ ಅದಕ್ಕೆ ಹೊಂದಿಕೊಂಡು ಹೋಗಬೇಕಾಗುತ್ತದೆ. ಇನ್ನು ಮೇಲೆ ಯಾರೂ ಮಾತನಾಡಲು ಬಳಬಾರದು. ನಿರ್ಣಯವನ್ನು ಮಂಡಿಸಿದ ಸದಸ್ಯರು ಮತ್ತು ಮಂತ್ರಿಗಳು ಮಾತನಾಡಿ ಚರ್ಚೆಗೆ ಉತ್ತರ ಕೊಡಲಿ. ಮೂರು-ನಾಲ್ಕು ಮಂತ್ರಿಗಳು ಮಾತನಾಡುವವರು ಇದ್ದಾರೆ. ಆದುದರಿಂದ ಈಗ ಅರ್ಧಗಂಟೆಯ ವಿರಾಮಕಾಲ ತೆಗೆದುಕೊಂಡು 10-30 ಗಂಟೆಗೆ ಮತ್ತೆ ಕೂಡೋಣ.

The House rose at Ten of the Clock and reassembled at Thirty Minutes past Ten of the Clock.

[MR. SPEAKER in the Chair.]

MEMBERS SWORN

1. Sri B. Sham Sundar (Bhalki S. C.)
2. Sri S. P. Talwalkar (Raibag S. C.)

MOTION ON GOVERNOR'S ADDRESS (*Debate contd.*)

Sri H. S. RUDRAPPA (Minister for Agriculture).—Mr. Speaker, before we proceed I want to know the procedure to be followed. I want to know whether all the Ministers can speak or only one Minister can speak on behalf of the Government.

Mr. SPEAKER.—The time allowed is about one hour for the reply. If the Hon'ble Minister who wants to give reply on behalf of the Government were to adjust the time and allow other Ministers to speak, I have no objection. Otherwise, if the other Ministers want to speak, that will be taken as intervening in the debate.

Sri B. K. PUTTARAMIYA (Channapatna).—Sir, I rise on a point of order, ನಾವು ಭಾಷಣಮಾಡುವಾಗ ಮಾನ್ಯ ಮಿತ್ರರು ಇಂಟರಪ್ಟ್ ಮಾಡಿ ನಮ್ಮ ಆಲೋಚನೆಯನ್ನು ಹಾಳು ಮಾಡುತ್ತಾರೆ. ಅದಕ್ಕೆ ಮಾನ್ಯ ಅಧ್ಯಕ್ಷರು ನಮಗೆ ರಕ್ಷಣೆ ಕೊಡಬೇಕು.

ನನ್ನ ಪಾಯಿಂಟ್ ಆಫ್ ಆರ್ಡರ್ ಇದು: ರಾಜ್ಯಪಾಲರು ಭಾಷಣ ಮಾಡಿದ್ದು ಜಂಟಿ ಅಧಿವೇಶನದಲ್ಲಿ. ಆಗ ಎರಡು ಸಭೆಗಳವರೂ ಇಲ್ಲಿ ಹಾಜರಿದ್ದರು. ಈಗ ಅವರಿಗೆ ವಂದನೆಯನ್ನು ತಮ್ಮ ಮೂಲಕ ಅರ್ಪಿಸಬೇಕಾಗಿದೆ. ಅಧ್ಯಕ್ಷರು ನಮ್ಮ ವಂದನೆಯನ್ನು ರಾಜ್ಯಪಾಲರಿಗೆ ತಲುಪಿಸಿದ ಮೇಲೆ ಅವರು ಸಂಪ್ರ